ಅಧ್ಯಕ್ಷರು :— ಕ್ವೆಶ್ಚನ್ ಅವರ್ ಆದಮೇಲೆ ತಾವು ಪ್ರಸ್ತಾಪ ಮಾಡಿ. ಸರ್ಕಾರದವರು ಅದಕ್ಕೆ ಉತ್ತರ ಹೇಳುತ್ತಾರೆ.

2. ಪ್ರಶ್ನೋತ್ತರ :

<u>ತಡೆಹಿಡಿಯಲಾದ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರ.</u>

ಶನಿವಾರ ಅರ್ಧದಿನ ಶಾಲೆ ನಡೆಸುವ ಬಗ್ಗೆ.

414 (3566) ಶ್ರೀ ರಾಮಲಿಂಗರೆಡ್ಡಿ (ಜಯನಗರ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶನಿವಾರಗಳಂದು ಪೂರ್ತಿ ದಿನ ಶಾಲೆ ನಡೆಯುವ ಪದ್ಧತಿಯನ್ನು ಯಾವಾಗಿನಿಂದ ಜಾರಿಗೆ ತರಲಾಗಿದೆ.

ಆ) ಇದಕ್ಕೆ ಕಾರಣಗಳೇನು?

ಇ) ಇದರಿಂದ ಮಕ್ಕಳು ಮಾನಸಿಕವಾಗಿ ಬಳಲಿ ಕ್ರೀಡಾ ಚಟುವಟಿಕೆಗಳಿಗೆ ಅವಕಾಶವಿಲ್ಲದೆ ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಈ) ಹಾಗಿದ್ದಲ್ಲಿ ಪ್ರತಿ ಶನಿವಾರ ಅರ್ಧದಿನ ಶಾಲೆ ನಡೆಸುವ ಹಿಂದಿನ ಪದ್ಧತಿಯನ್ನು ಜಾರಿಗೊಳಿಸಲು ಸರ್ಕಾರದ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಆ) 2000-2001ನೇ ಸಾಲಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರು ಜನಗಣತಿ ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳಲ್ಲಿ ಕಾರ್ಯನಿರ್ವಹಿಸಿದ್ದರಿಂದ ಶಾಲಾ ದಿವಸಗಳು ಕಡಿಮೆಯಾಗಿರುವುದರಿಂದ ಸರಿದೂಗಿಸಲು ಅನಿವಾರ್ಯವಾಗಿ, 40 ಶನಿವಾರಗಳ ಅರ್ಧ ದಿನಗಳನ್ನು ಪೂರ್ಣ ದಿನಗಳನ್ನಾಗಿ ಪರಿವರ್ತಿಸಲಾಗಿದೆ.

ಇ) ಇಲ್ಲ.

ಈ) ಮುಂದಿನ ವರ್ಷದಿಂದ ಮಾಮೂಲಿನಂತೆ ಶನಿವಾರ ಅರ್ಧದಿನ ಮಾತ್ರ ಶಾಲೆಗಳು ನಡೆಯುವುವು.

ಶ್ರೀ ರಾಮಲಿಂಗಾರೆಡ್ಡಿ :— ಮಾನ್ಯ ಅಧ್ಯಕ್ಷರೆ, ಮೊದಲಿನಿಂದಲೂ ಕೂಡ ಶಾಲೆಗಳಿಗೆ ಶನಿವಾರ ಅರ್ಧ ದಿನ ಹಾಗೂ ಭಾನುವಾರ ಪೂರ್ತಿ ದಿನ ರಜೆ ಇರುತ್ತಿತ್ತು.

ಆದರೆ ಈ ವರ್ಷದಿಂದ ಶನಿವಾರ ಪೂರ್ತಿ ದಿನ ಶಾಲೆ ನಡೆಯುತ್ತಿದ್ದಾರೆ. ಅದಕ್ಕೋಸ್ಕರ ಪ್ರಶ್ನೆ ಕೇಳಿದ್ದು ಮಾನ್ಯ ಸಚಿವರು ಸಮಂಜಸವಾದ ಉತ್ತರ ಕೊಟ್ಟಿದ್ದಾರೆ. ಮುಂದಿನ ವರ್ಷದಿಂದ ಶನಿವಾರ ಅರ್ಧ ದಿನ ಶಾಲೆ ನಡೆಸುತ್ತೇವೆಂದು ಹೇಳಿರುವುದರಿಂದ ಏನೂ ತೊಂದರೆ ಇಲ್ಲ.

ಶ್ರೀ ಎಸ್. ಸುರೇಶ್ ಕುಮಾರ್:— ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ 2000-2001ನೇ ಸಾಲಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು ಜನಗಣತಿ ಮತ್ತು ಜಿಲ್ಲಾ ಪಂಚಾಯತ್ ಚುನಾವಣೆ ಕಾರ್ಯನಿರ್ವಹಿಸಿದ್ದ ಕಾರಣ ಶಾಲಾ ದಿವಸಗಳು ಕಡಿಮೆಯಾಯಿತು ಎಂದು ಹೇಳಿದ್ದಾರೆ. ನಮ್ಮ ದೇಶದಲ್ಲಿ ಪ್ರತಿ ವರ್ಷ ಚುನಾವಣೆಗಳು ಇರುತ್ತವೆ. ಅದು ಜಿಲ್ಲಾ ಪಂಚಾಯತ್ ಇರಬಹುದು, ತಾಲ್ಲೂಕು ಪಂಚಾಯತ್ ಇರಬಹುದು, ವಿಧಾನಸಭೆ ಅಥವಾ ಲೋಕಸಭಾ ಚುನಾವಣೆಗಳು ಇರಬಹುದು. ಚುನಾವಣೆ, ಜನಗಣತಿ ಹಾಗೂ ಪೊಲಿಯೊ ಡ್ರಾಪ್ಸ್ ಹಾಕುವುದಕ್ಕೆ ಅವರನ್ನು ಉಪಯೋಗಿಸಿಕೊಂಡು ಈ ರೀತಿಯ ಯಾವುದೇ ಕೆಲಸಗಳು ಇಲ್ಲದೇ ಇರುವಾಗ ಶಿಕ್ಷಕರು ಮಕ್ಕಳಿಗೆ ಶಿಕ್ಷಣ ಕೊಡಬೇಕು. ಇದಕ್ಕೆಲ್ಲಾ ಶಿಕ್ಷಕರು ಏಕೆ ಇರಬೇಕು? ಇದಕ್ಕೆಂದು, ಬೇರೆ ನಿರುದ್ಯೋಗ ಯುವಕ, ಯುವತಿಯರು ಇರುವಾಗ ಅವರಿಗೆ ಈ ಕೆಲಸವನ್ನು ಕೊಟ್ಟು ಶಿಕ್ಷಕರು ಕೇವಲ ಶಿಕ್ಷಣವನ್ನು ಕೊಡುವ ಹಾಗೆ ಮಾಡಿ. ಮಾನ್ಯ ಸಚಿವರು ಇದರ ಬಗ್ಗೆ ಯೋಚನೆ ಮಾಡಬೇಕು. ನಮ್ಮ ಸರ್ಕಾರದಲ್ಲಿ ನನ್ನ ಒಂದು ಮನವಿ, ಶಿಕ್ಷಣ ಕೊಡಬೇಕಾದವರು ಪ್ರತಿವರ್ಷ ಚುನಾವಣೆ ಅಥವಾ ಜನಗಣತಿ ಈ ರೀತಿಯ ಕೆಲಸಗಳಲ್ಲಿ ಜೀತದಾಳುಗಳ ತರಹ ಕೆಲಸ ಮಾಡುವುದಕ್ಕೆ ಈ ಸರ್ಕಾರ ತಪ್ಪಿಸಿ ಶಿಕ್ಷಕರು ಕೇವಲ ಶಿಕ್ಷಣ ಕೊಡುವ ರೀತಿಯಲ್ಲಿ ಕೆಲಸ ಮಾಡವುದಕ್ಕೆ ಸರ್ಕಾರ ಯೋಚನೆ ಮಾಡಿ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಸಿ.ಆರ್. ಸಗೀರ್ ಅಹಮದ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಪರವಾಗಿ):— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ತಮ್ಮ ಮುಖಾಂತರ ಗಮನಕ್ಕೆ ತರುವುದೇನೆಂದರೆ ಶಿಕ್ಷಕರನ್ನು ಈ ಕೆಲಸಗಳಿಗೆ ನಾವು ಬಳಸಿಕೊಳ್ಳುತ್ತಿರುವುದರಿಂದ, ಈ ಬಗ್ಗೆ ರಾಜ್ಯ ಸರ್ಕಾರ ಒಂದು ಅಂತಿಮ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರ ಚುನಾವಣೆ ನಡೆಸುವಂತಹ ಸಂದರ್ಭದಲ್ಲಿ ಹಾಗೂ ರಾಜ್ಯದಲ್ಲಿ ಚುನಾವಣೆ ನಡೆಸುವಂತಹ ಸಂದರ್ಭದಲ್ಲಿ ಶಿಕ್ಷಕರು ಅಧಿಕೃತವಾಗಿ ಸರ್ಕಾರಿ ಸೇವೆಯಲ್ಲಿರುವುದರಿಂದ ಹಾಗೂ ಅವರ ಸಂಖ್ಯೆ ಹೆಚ್ಚಾಗಿರುವುದರಿಂದ ಸ್ವಮಸ್ಥಿತವಾಗಿ ಅವರನ್ನು ಬಳಸಿಕೊಳ್ಳುತ್ತಿರುವುದು ಸಮಂಜಸವೆಂದು ಕೇಂದ್ರ ಮತ್ತು ರಾಜ್ಯಸರ್ಕಾರ ಒಪ್ಪಿಕೊಂಡಿದೆ. ತಾವು ಹೇಳಿದ ಹಾಗೆ ನಾವು ಪ್ರಾಥಮಿಕ ಹಂತದಲ್ಲಿ ವಿದ್ಯಾಭ್ಯಾಸವನ್ನು ಬಹಳ ಮಾನ್ಯತೆ ಕೊಡಬೇಕಾಗಿರುತ್ತದೆ. ಮುಂದಿನ ದಿನಗಳಲ್ಲಿ ಕೇಂದ್ರ ಹಾಗೂ ರಾಜ್ಯ

ಸರ್ಕಾರಗಳ ಸೂಚನೆಗಳ ಮೇರೆಗೆ ಈ ವಿಚಾರದ ಬಗ್ಗೆ ತೀರ್ಮಾನ ತೆಗೆದುಕೊಳ್ಳಬಹುದು ಎಂದು ಹೇಳುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಅಧ್ಯಕ್ಷರೇ, ಎಲ್ಲೂ ಕೂಡ ಕೇಂದ್ರ ಸರ್ಕಾರದವರು ಶಿಕ್ಷಕರನ್ನು ನೇಮಕ ಮಾಡಿಕೊಂಡು ಚುನಾವಣೆ ಮಾಡಿ ಎಂದು ಸೂಚನೆ ಕೊಟ್ಟಿಲ್ಲ. ಅದು ನಮ್ಮ ಅನುಕೂಲ-ಸಿಂಧು ನೀತಿ. ಸರ್ಕಾರದ ಬೇರೆ ಬೇರೆ ಇಲಾಖೆಗಳಲ್ಲಿ ನೌಕರರು ಇದ್ದಾರೆ. ಅವರನ್ನು ಈ ಕೆಲಸಕ್ಕೆ ತೆಗೆದುಕೊಳ್ಳಬಹುದು. ಅಲ್ಲದೆ ನಿರುದ್ಯೋಗಿಗಳನ್ನು ಸಹ ತೆಗೆದುಕೊಳ್ಳಬಹುದು. ದಯವಿಟ್ಟು ನಾನು ಸರ್ಕಾರಕ್ಕೆ ಅಗ್ರಹ ಮಾಡುವುದು ಏನೆಂದರೆ ಇಲ್ಲಿ ಅನ್ ಎಡೆಡ್ ಸ್ಕೂಲಿನ ಶಿಕ್ಷಕರು ಬರುವುದಿಲ್ಲ. ಏಡೆಡ್ ಮತ್ತು ಸರ್ಕಾರಿ ಶಾಲೆಯ ಶಿಕ್ಷಕರು ಮಾತ್ರ ಬರುತ್ತಾರೆ. ಇವರುಗಳು ಮೊದಲೆ ಸಫರ್ ಆಗುತ್ತಿರುವವರು. ಆದುದರಿಂದ ಶಿಕ್ಷಣ ಪಡೆಯುತ್ತಿರುವ ನಮ್ಮ ಬಾಲಕ ಬಾಲಕಿಯರಿಗೆ ಕಷ್ಟ ಕೊಡದೇ ಇನ್ನು ಮುಂದಾದರೂ ಶಿಕ್ಷರನ್ನು ಈ ರೀತಿ ಬಳಸಿಕೊಳ್ಳುವುದನ್ನು ಸರ್ಕಾರ ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ಸದಸ್ಯರು ಕೊಟ್ಟಿರುವಂತಹ ಸಲಹೆಗಳನ್ನು ಮುಂದಿನ ದಿವಸಗಳಲ್ಲಿ ಪರಿಶೀಲಿಸುತ್ತೇವೆಂದು ಹೇಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ :— ಮಾನ್ಯ ಅಧ್ಯಕ್ಷರೆ, ಪ್ರಶ್ನೆ 'ಇ'ಗೆ ಉತ್ತರದಲ್ಲಿ ಇಲ್ಲವೆಂದು ಹೇಳಿದ್ದಾರೆ. ಈ ಕ್ರೀಡಾ ಹಾಸ್ಟೆಲ್ ಬಗ್ಗೆ ಹೇಳುವುದಾದರೆ ಮಂಗಳೂರಿನಲ್ಲಿ ಕ್ರೀಡಾ ಹಾಸ್ಟೆಲ್ ಈ ವರ್ಷ ಪ್ರಾರಂಭ ಮಾಡಿಲ್ಲ, ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ಕೊಡುವಂತಹ ಹಾಸ್ಟೆಲ್‌ಗಳನ್ನು ಆರಂಭ ಮಾಡದಿದ್ದರೆ ಹೇಗೆ ಸಾಧ್ಯವಾಗುತ್ತದೆ? ಕೆಲವು ಕ್ಷುಲ್ಲಕ ಕಾರಣಗಳಿಂದ ಹಣವನ್ನು ರಿಲೀಸ್ ಮಾಡದೇ ಕ್ರೀಡಾ ಹಾಸ್ಟೆಲ್‌ಗಳು ಆರಂಭವಾಗದೇ ಇದ್ದುದರಿಂದ ಅನೇಕ ಕ್ರೀಡಾ ವಿದ್ಯಾರ್ಥಿಗಳು ಸಫರ್ ಆಗಿರುವಂಥಾದ್ದು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಇನ್ನು ಎರಡನೆಯದಾಗಿ, ತಾವು ವಿದ್ಯಾ ಇಲಾಖೆಯಿಂದ ಏನು ಗ್ರಾಂಟ್ ಕೊಡುತ್ತಿದ್ದೀರಿ, ಇದರ ಬಗ್ಗೆ ನಮ್ಮ ಉದಾಹರಣೆಯನ್ನೇ ಹೇಳುವುದಾದರೆ 64 ಲಕ್ಷ ರೂಪಾಯಿಗಳ ಗ್ರಾಂಟ್ ಲ್ಯಾಪ್ಸ್ ಆಗಿದೆ. ಮಾರ್ಚ್ ಮೊದಲ ವಾರದಲ್ಲಿ ಗ್ರಾಂಟ್ ರಿಲೀಸ್ ಮಾಡುತ್ತಾರೆ, ಇದಕ್ಕೆ ಮಾರ್ಚ್ ತಿಂಗಳೊಳಗೆ ಕಟ್ಟಡವನ್ನು ಕಟ್ಟಿ ಬಿಲ್ ಕೊಡಬೇಕಿರುವಂತಹ ನಿಯಮಾವಳಿಯನ್ನು ಹಾಕುವಂಥಾದ್ದು ಸರಿಯಲ್ಲ. ಇನ್ನು ಬಾಕಿ ಇರುವಂತಹ ಹಣ ಎನಿದೆ, ಅದನ್ನು ರಿಲೀಸ್ ಮಾಡಬೇಕೆಂದು ವಿನಂತಿಸುತ್ತಿದ್ದೇನೆ, ಮತ್ತೆ ಬಜೆಟ್ ನಲ್ಲಿ ಮಂಡನೆಯಾದ ಹಣವನ್ನು ಹತ್ತು-ಹನ್ನೊಂದು ತಿಂಗಳುಗಳ ನಂತರ ಬಿಡುಗಡೆ ಮಾಡುವಂತಹ ಸಂಪ್ರದಾಯವನ್ನು ಬಿಡಬೇಕು. ತಾವು ತಕ್ಷಣವೇ ಈ

ಹಣವನ್ನು ಬಿಡುಗಡೆ ಮಾಡಿದರೆ ಕಟ್ಟಡದ ಕಾಮಗಾರಿಗಳನ್ನು ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ಜಿಲ್ಲೆಗೆ 64 ಲಕ್ಷ ರೂಪಾಯಿಗಳ ಗ್ರಾಂಟ್ ಲ್ಯಾಪ್ಸ್ ಎಂದು ಏನಿದೆ, ಅದು ಕರ್‌ಸ್ಪಾಂಡೆನ್ಸ್ ಸ್ಟೇಜ್‌ನಲ್ಲಿ ಬರುತ್ತಿದೆ. ಮಾನ್ಯ ಅಧ್ಯಕ್ಷರೆ, ನಾನು ಮೊದಲನೆಯದಾಗಿ ಈ ಕ್ರೀಡಾ ಹಾಸ್ಟೆಲ್ ಬಂದ್ ಮಾಡಿರುವಂಥಾದ್ದು ಏನಿದೆ, ಅದನ್ನು ಆರಂಭ ಮಾಡಬೇಕು, ಈ ಕ್ರೀಡಾ ಕಟ್ಟಡಗಳಿಗೆ ಸಂಬಂಧಪಟ್ಟಂತೆ ಗ್ರಾಂಟ್ ರಿಲೀಸ್ ಆಗಿರುವಂಥಾದ್ದು ಲ್ಯಾಪ್ಸ್ ಆಗಿಲ್ಲವೆಂದು ಪರಿಗಣಿಸಿ ಅದನ್ನು ಬಿಡುಗಡೆ ಮಾಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುತ್ತಿರುವುದು ಈ ಪ್ರಶ್ನೆಗೆ ಸಂಬಂಧಪಡದೇ ಇದ್ದರೂ ಕೆಲವು ವಿಚಾರಗಳನ್ನು ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಪ್ರಸ್ತಾಪ ಮಾಡಿದ್ದಾರೆ. ಈಗ ನನ್ನ ಹತ್ತಿರ ಮಾಹಿತಿ ಇರುವಂತೆ ಕ್ರೀಡಾ ಹಾಸ್ಟೆಲ್ ಗಳ ವಿಚಾರ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಇದು ಯುವಜನ ಮತ್ತು ಕ್ರೀಡಾ ಸಚಿವರ ವ್ಯಾಪ್ತಿಗೆ ಬರುತ್ತದೆ. ಇನ್ನು ಉಳಿದ ವಿಚಾರಗಳನ್ನು ಏನು ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ಮುಂದೆ ಪರಿಶೀಲಿಸುತ್ತೇವೆ.

ಆರೋಗ್ಯ ಇಲಾಖೆಯಿಂದ ಸರಬರಾಜು ಆಗುವ ಔಷಧಿಗಳ ಗುಣಮಟ್ಟ.

415(3911) ಶ್ರೀ ಅಂಜನಮೂರ್ತಿ (ನೆಲಮಂಗಲ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯದಲ್ಲಿ ಆರೋಗ್ಯ ಇಲಾಖೆಯಿಂದ ಆಸ್ಪತ್ರೆಗಳಿಗೆ ಆರೋಗ್ಯ ಕೇಂದ್ರಗಳಿಗೆ ಆರೋಗ್ಯ ಘಟಕಗಳಿಗೆ ಕಳಪೆ ಔಷಧಿಗಳು ಸರಬರಾಜು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸರಬರಾಜು ಮಾಡಿರುವ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಡಾಃ ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಅಂಜನಮೂರ್ತಿ :— ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಆರೋಗ್ಯ ಸಚಿವರು ವೈದ್ಯರಾಗಿರುವಂಥವರು, ಆದರೆ ಇವತ್ತು ದುರದೃಷ್ಟವಶಾತ್ ರಾಜ್ಯ ಎಲ್ಲಾ